## ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 04/07/2008 ರ ನಡವಳಿಗಳು

**ವಿಷಯ ಸಂಖ್ಯೆ:293/2008–09**

ಬೆಂಗಳೂರಿನ ಬಿದರಹಳ್ಳಿ ಹೋಬಳಿಯ, ಬಯ್ಯಪ್ಪನಹಳ್ಳಿ (ಚಿಮ್ಮಸಂದ್ರ) ಗ್ರಾಮದ ಸರ್ವೇ ನಂ.44 ರಲ್ಲಿ ಘನತ್ಯಾಜ್ಯ ವಸ್ತುಗಳ ಸಂಸ್ಕರಣ ಮತ್ತು ಇಂಜಿನೀಯರ್ಡ್ ಲ್ಯಾಂಡ್‌ಫಿಲ್ ಮೂಲಕ ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವ ಯೋಜನೆಯ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ ವಲಯಗಳಿಂದಾಗಿ ಬೆಂಗಳೂರಿನ ಜನಸಂಖ್ಯೆಯು ಅಂದಾಜು 7.5 ದಶಲಕ್ಷಗಳಾಗಿರುತ್ತದೆ. ಕಳೆದ ದಶಕದಲ್ಲಿ ನಗರವು ಕಂಡಿರುವ ಆರ್ಥಿಕ ಬೆಳವಣಿಗೆಯಿಂದಾಗಿ ಅಗಣಿತ ಉದ್ಯೋಗಾವಕಾಶಗಳು ಸೃಷ್ಟಿಯಾಗಿದೆ. ದೇಶದ ನಾನಾ ಭಾಗಗಳಿಂದ ವೃತ್ತಿನಿರತರು ನಗರಕ್ಕೆ ಆಗಮಿಸಿರುತ್ತಾರೆ. ಜನಸಂಖ್ಯಾ ಸ್ಫೋಟ ಮತ್ತು ಸಾರ್ವಜನಿಕರ ಮೇಲ್ಮಟ್ಟದ ಆರ್ಥಿಕ ಮಟ್ಟವು ಜನರ ಜೀನವ ಶೈಲಿಯಲಿ ಅಪಾರ ಬದಲಾವಣೆಯನ್ನು ತಂದಿದೆ. ಇದರ ಪರಿಣಾಮವಾಗಿ, ಘನತ್ಯಾಜ್ಯ ವಸ್ತುಗಳ ಪ್ರಮಾಣವೂ ಬಹಳಷ್ಟು ಹೆಚ್ಚಿದೆ. ಎಂ.ಎಸ್.ಡಬ್ಲ್ಯೂ ನಿಯಮಾವಳಿ 2000 (ಮೇಂಟನೆನ್ಸ್ ಮತ್ತು ಹ್ಯಾಂಡಲಿಂಗ್) ಪ್ರಕಾರ ಘನತ್ಯಾಜ್ಯ ವಸ್ತುಗಳ ಸುರಕ್ಷಿತ ಮತ್ತು ವೈಜ್ಞಾನಿಕ ವಿಲೇವಾರಿಯು ಸ್ಥಳಿಯ ನಗರ ಸಭೆಗಳ ಜವಾಬ್ದಾರಿಯಾಗಿರುತ್ತದೆ.

ಪಾಲಿಕೆಯು ಖಾಸಗಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಮಾವಳ್ಳಿಪುರ (ಪ್ರತಿದಿನ 600 ಮೆ.ಟ) ಮತ್ತು ಮಂಡೂರು (ಪ್ರತಿದಿನ 1000 ಮೆ.ಟ) ಘನತ್ಯಾಜ್ಯಗಳ ವಿಲೇವಾರಿ ಘಟಕಗಳನ್ನು ಸ್ಥಾಪಿಸಿದೆ. ಕೆ.ಸಿ.ಡಿ.ಸಿ ಸಂಸ್ಥೆಯು ಪ್ರತಿದಿನ 300 ಮೆ.ಟ ಘನತ್ಯಾಜ್ಯವನ್ನು ಸಂಸ್ಕರಿಸುತ್ತಿದ್ದು, ತನ್ನ ಸಾಮರ್ಥ್ಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿದೆ. ಪಾಲಿಕೆಯು ಮೆ.ಟೆರ್ರಾಫಾರ್ಮ ಸಂಸ್ಥೆಯೊಡನೆ ದೊಡ್ಡಬಳ್ಳಾಪುರದ ಹತ್ತಿರ ಪ್ರತಿ ದಿನ 1000 ದಿಂದ 1500 ಮೆ.ಟ. ಘನತ್ಯಾಜ್ಯವನ್ನು ಸಂಸ್ಕರಿಸುವ ಘಟಕಕ್ಕೆ ಒಪ್ಪಂದ ಮಾಡಿಕೊಂಡಿದ್ದು ಪ್ರಾರಂಭಿಸುವ ಹಂತದಲ್ಲಿದೆ ಮತ್ತು ಹೊಸದಾಗಿ ದೊಡ್ಡಬಿದರಕಲ್ಲು (ಪ್ರತಿ ದಿನ 1000 ಮೆ.ಟ) ಹಾಗೂ ಮಂಡೂರು–ಗುಂಡೂರು ರಸ್ತೆಯ ಉತ್ತರ ಭಾಗದಲ್ಲಿರುವ ಪಾಲಿಕೆಯ ನಿವೇಶನದಲ್ಲಿ (ಪ್ರತಿ ದಿನ 1000 ಮೆ.ಟ) ಘನತ್ಯಾಜ್ಯಗಳ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ಈಗಾಗಲೇ ಟೆಂಡರ್ ಪ್ರಕಟಿಸಲಾಗಿದೆ.

ಹೊಸ ವಲಯಗಳ ಸೇರ್ಪಡೆಯಿಂದಾಗಿ ಈ ಹಿಂದಿನ ಬೆಂಗಳೂರು ನಗರಕ್ಕಾಗಿ ಪಾಲಿಕೆಯು ಮಾಡಿದ್ದ ವ್ಯವಸ್ಥೆಯ ತೀವ್ರ ಕೊರತೆ ಕಂಡು ಬಂದಿರುತ್ತದೆ ಮತ್ತು ಘನತ್ಯಾಜ್ಯ ನಿರ್ವಹಣಾ ಘಟಕಗಳ ಅವಶ್ಯಕತೆ ತೀವ್ರವಾಗಿರುತ್ತದೆ. ಹಾಲಿ ಇರುವ ಪರಿಸ್ಥಿತಿ ಮತ್ತು ಮುಂಬರುವ ವರ್ಷಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯಗಳನ್ನು ಪರಿಗಣಿಸಿ ಹೆಚ್ಚುವರಿಯಾಗಿ ಪ್ರತಿ ದಿನ ಸುಮಾರು 2000 ದಿಂದ 3000 ಮೆ.ಟ ಘನತ್ಯಾಜ್ಯಗಳ ನಿರ್ವಹಣೆಯ ಅವಶ್ಯಕತೆಯಿರುತ್ತದೆ. ಜನಸಂಖ್ಯಾ ಸ್ಫೋಟ ಮತ್ತು ಸಾರ್ವಜನಿಕರ ಮೇಲ್ಮಟ್ಟದ ಆರ್ಥಿಕ ಮಟ್ಟವು ಘನತ್ಯಾಜ್ಯ ವಸ್ತುಗಳ ಪ್ರಮಾಣ ಮತ್ತು ಗುಣಗಳಲ್ಲಿ ನಿರಂತರ ಬದಲಾವಣೆಯಾಗುತ್ತಿದ್ದು, ಮುಂಬರುವ ವರ್ಷಗಳಲ್ಲಿ ಅಂದಾಜಿಸುವುದು ಕಷ್ಟಕರವಾಗಿದೆ.

ಘನತ್ಯಾಜ್ಯ ವಸ್ತುಗಳನ್ನು ಬೇರ್ಪಡಿಸಿ, ಗೊಬ್ಬರವನ್ನು ತಯಾರಿಸಿ, ಉಳಿಕೆ ನಿರುಪಯುಕ್ತ ವಸ್ತುಗಳನ್ನು ಇಂಜಿನೀಯರ್ಡ್ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡುವುದು ಈವರೆಗಿನ ತಂತ್ರಜ್ಞಾನವಾಗಿರುತ್ತದೆ. ಸಾಂಪ್ರದಾಯಿಕ ಇಂಜಿನೀಯರ್ಡ್ ಲ್ಯಾಂಡ್‌ಫಿಲ್ ಯೋಜನೆಗಳಿಗೆ ಭಾರಿ ವಿಸ್ತೀರ್ಣದ ಜಮೀನು ಅವಶ್ಯಕವಿದ್ದು, ಜಮೀನಿನ ಮರುಪ್ರಯೋಗವು ಸೀಮಿತವಾಗಿರುತ್ತದೆ. ಆದರೆ, ಘನತ್ಯಾಜ್ಯ ವಸ್ತುಗಳ ಸಂಸ್ಕರಣಾ ತಂತ್ರಜ್ಞಾನದಲ್ಲಿ ಆಗಿರುವ ಮುನ್ನಡೆಯಿಂದಾಗಿ ಪ್ಲಾಸ್ಟಿಕ್, ರಬ್ಬರ್, ಅನಿಲ ಮುಂತಾದ ಮರುಪಯೋಗಿ ಉತ್ಪಾದನೆಗಳು ಮತ್ತು ವಿದ್ಯುತ್‌ಚ್ಛಕ್ತಿ

ಉತ್ಪಾದನೆ ಮುಂತಾದ ಯೋಜನೆಗಳನ್ನು ಅಳವಡಿಸಲು ಸಾಧ್ಯವಾಗಿದೆ. ಜಮೀನಿನ ಬೆಲೆಗಳು ಗಗನಕ್ಕೇರಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ಕನಿಷ್ಟ ಭೂಮಿ ಮತ್ತು ಅವಧಿಯಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸುವ ತಂತ್ರಜ್ಞಾನವು ಇಂದಿನ ಅವಶ್ಯಕತೆಯಾಗಿರುತ್ತದೆ. ಕೇಂದ್ರದ ಎಂಎನ್ಇಎಸ್ ಶಿಫಾರಸ್ಸು ಮಾಡಿರುವ ಬಯೋಗ್ಯಾಸ್ ಮತ್ತು ವಿದ್ಯುತ್‌ಚ್ಛಕ್ತಿ ತಯಾರಿಕ ತಂತ್ರಜ್ಞಾನಕ್ಕೆ ಸರ್ವೋಚ್ಛ ನ್ಯಾಯಾಲಯವು ಅನುಮತಿ ನೀಡಿದೆ.

ಇತ್ತೀಚಿನ ದಿನಗಳಲ್ಲಿ ಹಲವಾರು ಸಂಸ್ಥೆಗಳು ತಮ್ಮ ಆಧುನಿಕ ತಂತ್ರಜ್ಞಾನವನ್ನು ಪಾಲಿಕೆಯ ಅಧಿಕಾರಿಗಳ ಮುಂದೆ ನಿವೇದಿಸಿದ್ದು, ಘನತ್ಯಾಜ್ಯಗಳ ಬೇರ್ಪಡಿಸುವಿಕೆ ಮತ್ತು ಪ್ಲಾಸ್ಟಿಕ್, ರಬ್ಬರ್, ಅನಿಲ ಮುಂತಾದ ಮರುಪಯೋಗಿ ಉತ್ಪಾದನೆಗಳು ಮತ್ತು ವಿದ್ಯುತ್‌ಚ್ಛಕ್ತಿ ಉತ್ಪಾದನೆ ಮುಂತಾದ ಸಂಸ್ಕರಣೆಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟ ವ್ಯವಸ್ಥೆಯಲ್ಲಿ ನಡೆಯುವುದೆಂದು ವಿಧಿತವಾಯಿತು. ಈ ವಿಧಾನದಿಂದ ಸ್ವಚ್ಛ ಹಾಗೂ ಆರೋಗ್ಯಕರ ಪರಿಸರ ಉಂಟಾಗಿ, ಘಟಕ ಮತ್ತು ಅದರ ನೆರೆಹೊರೆಯಲ್ಲಿ ದುರ್ನಾತ ಮುಂತಾದ ದೂರುಗಳಿಗೆ ಅವಕಾಶ ಇಲ್ಲದಂತಾಗುತ್ತದೆ ಹಾಗೂ ಈ ತಂತ್ರಜ್ಞಾನದ ಯೋಜನೆಗಳಿಗೆ ಘನತ್ಯಾಜ್ಯ ವಸ್ತುಗಳ ಪ್ರಮಾಣದ ಅನುಸಾರ ಸುಮಾರು 20 ರಿಂದ 25 ಎಕರೆ ಜಮೀನು ಸಾಕಾಗುವುದೆಂದು ತಿಳಿದುಬಂದಿರುತ್ತದೆ.

ಮೇಲೆ ತಿಳಿಸಿದ ವಿಷಯಗಳ ಹಿನ್ನೆಲೆಯಲ್ಲಿ ಆಧುನಿಕ ತಂತ್ರಜ್ಞಾನವುಳ್ಳ ಅರ್ಹ ಘನತ್ಯಾಜ್ಯ ಆಪರೇಟರ್‌ಗಳಿಂದ ಟೆಂಡರ್ ಕರೆಯಲು ಈ ಮೂಲಕ ಪ್ರಸ್ತಾಪಿಸಲಾಗಿದೆ. ಈ ಯೋಜನೆಗಾಗಿ ಪಾಲಿಕೆಯು ಯಶಸ್ವಿ ಬಿಡ್ದುದಾರರಿಗೆ ಸುಮಾರು 10 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ 20 ವರ್ಷಗಳಿಗೆ ಮತ್ತು ಯೋಜನೋತ್ತರ 15 ವರ್ಷಗಳಿಗೆ ಆಪರೇಟರ್‌ನ ಖರ್ಚು ಮತ್ತು ವೆಚ್ಚದಲ್ಲಿ ನೀಡುವುದು. ಆಪರೇಟರ್‌ರಿಂದ ಪಾಲಿಕೆಗೆ ಎಕರೆ ಒಂದಕ್ಕೆ ವಾರ್ಷಿಕ ರೂ.100/- ರಂತೆ ಹತ್ತು ಎಕರೆ ಜಮೀನಿನ ಗುತ್ತಿಗೆ ಹಣವಾಗಿ ಪಡೆಯಲಾಗುವುದು. ಈ ಟೆಂಡರಿನಲ್ಲಿ ಪಾಲಿಕೆಯು ಗುತ್ತಿಗೆದಾರರಿಗೆ ನೀಡಬೇಕಾದ ಟಿಪ್ಪಿಂಗ್ ಫೀ ಅನ್ನು ನಮೂದಿಸಬೇಕಾಗಿರುತ್ತದೆ.

2008-09ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ 'ಕೊಳಚೆ ಗುಂಡಿಗಳ ಅಭಿವೃದ್ಧಿ' ಲೆಕ್ಕ ಶೀರ್ಷಿಕೆಯಡಿಯಲ್ಲಿ ಸದರಿ ಯೋಜನೆಗಾಗಿ ರೂ.200.00 ಲಕ್ಷಗಳನ್ನು ಮೀಸಲಿರೀಸಲಾಗಿದೆ.

ಈ ಹಿನ್ನಲೆಯಲ್ಲಿ ಕೆಳಕಂಡಂತೆ ಅನುಮೋದನೆ ಕೋರಲಾಗಿದೆ.

1. ಬೆಂಗಳೂರಿನ ಬಿದರಹಳ್ಳಿ ಹೋಬಳಿಯ, ಬಯ್ಯಪ್ಪನ ಹಳ್ಳಿ (ಚಿಮ್ಮಸಂದ್ರ) ಗ್ರಾಮದ ಸರ್ವೆ ನಂ.44 ರಲ್ಲಿ ಘನತ್ಯಾಜ್ಯ ವಸ್ತುಗಳ ಸಂಸ್ಕರಣ ಮತ್ತು ಇಂಜಿನೀಯರ್ಡ್ ಲ್ಯಾಂಡ್‌ಫಿಲ್ ಮೂಲಕ ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.
2. ಬೆಂಗಳೂರಿನ ಬಿದರಹಳ್ಳಿ ಹೋಬಳಿಯ, ಬಯ್ಯಪ್ಪನ ಹಳ್ಳಿ (ಚಿಮ್ಮಸಂದ್ರ) ಗ್ರಾಮದ ಸರ್ವೆ ನಂ.44 ರಲ್ಲಿ ಘನತ್ಯಾಜ್ಯ ವಸ್ತುಗಳ ಸಂಸ್ಕರಣ ಮತ್ತು ಇಂಜಿನೀಯರ್ಡ್ ಲ್ಯಾಂಡ್‌ಫಿಲ್ ಮೂಲಕ ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವ ಯೋಜನೆಗೆ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದನೆ.
3. ಬೆಂಗಳೂರಿನ ಬಿದರಹಳ್ಳಿ ಹೋಬಳಿಯ, ಬಯ್ಯಪ್ಪನ ಹಳ್ಳಿ (ಚಿಮ್ಮಸಂದ್ರ) ಗ್ರಾಮದ ಸರ್ವೆ ನಂ.44 ರಲ್ಲಿ ಘನತ್ಯಾಜ್ಯ ವಸ್ತುಗಳ ಸಂಸ್ಕರಣ ಮತ್ತು ಇಂಜಿನೀಯರ್ಡ್ ಲ್ಯಾಂಡ್‌ಫಿಲ್‌ಗಾಗಿ 10 ಎಕರೆ ಜಮೀನನ್ನು ಸದರಿ ಯೋಜನೆಗಾಗಿ ಸರ್ಕಾರದ ಅನುಮೋದನೆಗೆ ಒಳಪಟ್ಟು 20 ವರ್ಷಗಳು ಮತ್ತು ಯೋಜನೋತ್ತರ 15 ವರ್ಷಗಳ ಅವಧಿಗೆ ಎಕರೆ ಒಂದಕ್ಕೆ ರೂ.100.00 ರಂತೆ ಗುತ್ತಿಗೆ ನೀಡಲು ಅನುಮೋದನೆ

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18/06/2008 ರ ಟಿಪ್ಪಣಿ.

**<u>ತೀರ್ಮಾನ:</u>** ಆಯುಕ್ತರವರು ದಿನಾಂಕ:18/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:311/2008–09**

According Administrative Approval and Work Code for Rejuvenation of 17 lakes under Jawaharlal Nehru National Urban Renewal Mission Programme.

**ಪ್ರಸ್ತಾವನೆ:**

The Chief Engineer project-2 has submitted proposal of estimate for rejuvenation of 17 lakes under the Jawaharlal Nehru National Urban Renewal Mission Programme amounting to Rs.18998 lakhs based on the current Schedule Rate of 2007-08 for according Administrative Approval and Work Code.

The Proposal submitted by the Chief Engineer, Project 2 for rejuvenation of 17 lakes under the JNNURM seeking administrative approval for Rs.18998 lakh and work code is as below.

| Sl.No. | Name of lake | Estimated Cost Rs.In Lakhs |
|---|---|---|
| 1. | Kavadenahalli of Mahadevapura Zone | 496.25 |
| 2. | Chinnappanahalli of Mahadevapura Zone | 175.40 |
| 3. | Ambalipura of Bommanahalli Zone | 151.84 |
| 4. | Puttenahalli of Bommanahalli Zone | 183.46 |
| 5. | Kaikondanahalli of Bommanahalli Zone | 1085.36 |
| 6. | Allalasandra of Byatarayanapura Zone | 954.02 |
| 7. | Attur of Byatarayanapura Zone | 1503.04 |
| 8. | Yelahanka of Byatarayanapura Zone | 5984.45 |
| 9. | Kalkere of Byatarayanapura Zone | 3775.05 |
| 10. | Puttenahalli of Byatarayanapura Zone | 1185.21 |
| 11. | Nayandahalli of Rajrajeshwari nagar Zone | 565.44 |
| 12. | Kodigehalli of Rajarajeshwari nagar Zone | 401.21 |
| 13. | Uttarahalli of Rajrajeshwari nagar Zone | 376.85 |
| 14. | Doerkere of Rajarajeshwari nagar Zone | 628.54 |
| 15. | Dasarahalli of Dasarahalli Zone | 956.80 |
| 16. | Deepenjali of Bangalore South Zone | 336.95 |
| 17. | Malgal of Bangalore South Zone | 238.22 |
| | Total Estimated Cost Rs. | 18998.09 |

The Chief Engineer Project-2 has submitted the detailed estimate based on Current Schedule of Rates of 2007-08 for 17 lakes seeking work code and Administrative Approval. Note is placed for kind approval, before the Honourable Administrator, Bruhut Bangalore Mahanagara palike.

The Proposal of the Commissioner Note, Date:02/07/2008 for Administrative Approval and Work Code for Rejuvenation of 17 lakes under Jawaharlal Nehru National Urban Renewal Mission Programme.

**ತೀರ್ಮಾನ:** Commissioners Note Date:02/07/2008 is approved.

(ದಿಲೀಪ್ ರಾವ್)
ಆಡಳಿತಗಾರರು

57

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:15/07/2008ರ ನಡವಳಿಗಳು

ವಿಷಯದ ಸಂಖ್ಯೆ:313/2008-09

Improvements to road side drain and providing covering slabs to 1st , 2nd , 3rd , 5th ,6th, 7th & 8th cross roads and BTS roads, B.G. Road, Hosur road and other road at Hombegowda nagar in ward No.62. ರ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

Improvements to road side drain and providing covering slabs to 1st , 2nd , 3rd , 5th ,6th, 7th & 8th cross roads and BTS roads, B.G. Road, Hosur road and other road at Hombegowda nagar in ward No.62. ರ ಕಾಮಗಾರಿಯ ಅಂದಾಜು ಮೊತ್ತ ರೂ.82.50 ಲಕ್ಷಕ್ಕೆ ದರಪಟ್ಟಿ 2002-03 ರಂತೆ ತಯಾರಿಸಿದ್ದು ಟೆಂಡರ್ ಮುಖಾಂತರ ಗುತ್ತಿಗೆದಾರರಾದ ಶ್ರೀ.ಎನ್.ಕೆ.ರೆಡ್ಡಿ ರವರಿಗೆ ಶೇ.30.28% ರಷ್ಟು ಹೆಚ್ಚುವರಿ ದರಗಳಿಗೆ ದಿನಾಂಕ:09/01/2007 ರಂದು ಕಾರ್ಯಾದೇಶ ನೀಡಲಾಗಿದೆ. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಕಾರ್ಯಪಾಲಕ ಅಭಿಯಂತರರು (ಜಯನಗರ) ರವರು ಮೇಲಾಧಿಕಾರಿಗಳು ಸೂಚಿಸಿದಂತೆ ಹಾಲಿ ರಸ್ತೆಗಳಲ್ಲಿ ಕವರಿಂಗ್ ಕಲ್ಲು ಚಪ್ಪಡಿಗಳನ್ನು ಹಾಗೇ ಉಳಿಸಿಕೊಂಡು ಈ ಉಳಿತಾಯ ಹಣದಲ್ಲಿ ಸದರಿ ವಾರ್ಡ್‌ನಲ್ಲಿ ಅಗತ್ಯವಾಗಿರುವ ನಾರಾಯಣಪುರ ಕೊಳಚೆ ಪ್ರದೇಶ ಮತ್ತು ಸುಣ್ಣಕಲ್ ಫಾರಂ ತಗ್ಗುಪ್ರದೇಶಗಳಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಿಸಲು ಕೆಲವು ಅಂಶಗಳನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಕಾಮಗಾರಿಯನ್ನು ಮೂಲ ಗುತ್ತಿಗೆದಾರರಿಂದ ಅನುಮೋದನೆ ನಿರೀಕ್ಷಿಸಿ ಕ್ರಮ ತೆಗೆದುಕೊಂಡಿರುವುದಾಗಿ ಕಾರ್ಯಪಾಲಕ ಅಭಿಯಂತರರವರು ವರದಿ ಮಾಡಿರುತ್ತಾರೆ.

ಈ ಸಂಬಂಧ ಮೂಲ ಅಂದಾಜು ಪಟ್ಟಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಕಲ್ಲು ಚಪ್ಪಡಿ ಬದಲಾಗಿ ಸಿಮೆಂಟ್ ಕಾಂಕ್ರೀಟ್ ನಿರ್ಮಿಸಲು ಅವಶ್ಯವಿರುವ ಇ.ಐ.ಆರ್.ಎಲ್ ಮತ್ತು ವರ್ಕ್‌ಸ್ಲಿಪ್ ಅಂಶಗಳನ್ನು ಅಳವಡಿಸಿಕೊಂಡು ಮಾರ್ಪಾಡಿತ ಅಂದಾಜು ಪಟ್ಟಿ ರೂ.1,07,20,000.00 ಗಳಿಗೆ (ಟಿ.ಪಿ.ಸೇರಿ) ತಯಾರಿಸಿ ಅನುಮೋದನೆಗಾಗಿ ಮುಖ್ಯ ಅಭಿಯಂತರರು (ದಕ್ಷಿಣ) ರವರು ಸಲ್ಲಿಸಿದ್ದು, ಈ ಪ್ರಸ್ತಾವನೆಯನ್ನು ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಮಾರ್ಪಾಡಿತ ಅಂದಾಜು ಪಟ್ಟಿಯಲಿ ಹಾಲಿ ರಸ್ತೆಗಳಲಿ ಕವರಿಂಗ್ ಕಲ್ಲು ಚಪ್ಪಡಿಗಳನ್ನು ಹಾಗೇ ಉಳಿಸಿಕೊಂಡು ಈ ಉಳಿತಾಯ ಹಣದಲ್ಲಿ ಸದರಿ ವಾರ್ಡ್‌ನಲ್ಲಿ ಅಗತ್ಯವಿರುವ ನಾರಾಯಣಪುರ ಕೊಳಚೆ ಪ್ರದೇಶ ಮತ್ತು ಸುಣ್ಣಕಲ್ ಫಾರಂ ತಗ್ಗು ಪ್ರದೇಶಗಳಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಿಸಲು ತೆಗೆದುಕೊಂಡ ಕ್ರಮದಂತೆ ಮಾರ್ಪಾಡಿತ ಅಂದಾಜು ಪಟ್ಟಿಯಲ್ಲಿ ಅಡಕಗೊಳಿಸಿರುವ EIRL& Workslip ಐಟಂಗಳ ಅಂಶಗಳಿಗೆ ಮತ್ತು ಮಾರ್ಪಾಡಿತ ಅಂದಾಜು ಮೊತ್ತವಾದ ರೂ.1,07,20,000.00 (ಟಿ.ಪ.ಸೇರಿ) ಅನುಮೋದಿಸುವ ಆರ್ಥಿಕದತ್ತವಾದ ಅಧಿಕಾರವು ಮಾನ್ಯ ಆಡಳಿತಗಾರರವರ ವ್ಯಾಪ್ತಿಯಲ್ಲಿರುತ್ತದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಅನುಮೋದನೆ ಕೋರಿದೆ:

1. ಕಾರ್ಯಪಾಲಕ ಅಭಿಯಂತರರು (ಜಯನಗರ) ರವರು ಸಲ್ಲಿಸಿರುವ ಹೆಚ್ಚುವರಿ ಅಂಶಗಳ ಪಟ್ಟಿಯ ಮೊತ್ತ ರೂ.53,93,023.38 ಗಳಿಗೆ ಅನುಮೋದನೆ.
2. ಕಾರ್ಯಪಾಲಕ ಅಭಿಯಂತರರು (ಜಯನಗರ) ರವರು ಸಲ್ಲಿಸಿರುವ ವರ್ಕ್‌ಸ್ಲಿಪ್ ಮೊತ್ತ ರೂ.1,34,086.00 ಗಳಿಗೆ ಅನುಮೋದನೆ
3. ಮಂಜೂರಾದ ಮೂಲ ಅಂದಾಜಿನ ವ್ಯಾಪ್ತಿಯಲ್ಲಿರುವ ರೂ.1,07,20,000.00 ಗಳ ಮೊತ್ತದ ಮಾರ್ಪಾಡು ಅಂದಾಜು ಪಟ್ಟಿ ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು

ವಿಷಯದ ಸಂಖ್ಯೆ:91/2008–09

ಟೌನ್ ಹಾಲ್ ವೃತ್ತದಿಂದ ಮಿನರ್ವ ವೃತ್ತದವರೆಗೆ ಜೆ.ಸಿ.ರಸ್ತೆಯಲ್ಲಿ ಮೇಲು ಸೇತುವೆ (Elevated Corridor) ನಿರ್ಮಿಸುವ ಸಂಬಂಧ ಸಲಹೆಗಾರರನ್ನು ನೇಮಕ ಮಾಡುವ ಬಗ್ಗೆ.

ಪ್ರಸ್ತಾವನೆ:

ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ವಾಹನ ದಟ್ಟಣೆಯು ಒಂದು ಪ್ರಮುಖ ಸಮಸ್ಯೆಯಾಗಿ ತಲೆದೋರಿದ್ದು, ರಸ್ತೆಗಳಲ್ಲಿ ಸಂಚರಿಸುವುದು ಕ್ಲಿಷ್ಟಕರವಾಗಿದೆ. ಈ ಸಮಸ್ಯೆಗಳನ್ನು ಪರಿಹರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಹಲವು ಯೋಜನೆಗಳನ್ನು ರೂಪಿಸಿದ್ದು, ಜೆ.ಸಿ.ರಸ್ತೆಯಲ್ಲಿ ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಮೇಲು ಸೇತುವೆ ನಿರ್ಮಿಸುವ ಪ್ರಸ್ತಾವನೆಯ ಜೊತೆಗೆ ಹಡ್ಸನ್ ವೃತ್ತದಲ್ಲಿ ವಾಹನ ದಟ್ಟಣೆ ಕಡಿಮೆ ಮಾಡಲು ಗ್ರೇಡ್ ಸೆಪರೇಟರ್ ನಿರ್ಮಿಸುವ ಪ್ರಸಾವನೆಯು ಪ್ರಮುಖವಾಗಿದೆ.

ಪ್ರಸ್ತುತ ಜೆ.ಸಿ.ರಸ್ತೆಯು ಹಲವಾರು ವಾಣಿಜ್ಯ ಮಳಿಗೆಗಳನ್ನು ಹೊಂದಿದ್ದು, ಮಿನರ್ವ ವೃತ್ತದಿಂದ ಟೌನ್‌ಹಾಲ್ ವೃತ್ತದ ಕಡೆಗೆ ಏಕಮುಖ ಸಂಚಾರ ಜಾರಿಯಲ್ಲಿದೆ. ಪ್ರಸ್ತಾಪಿತ ಮೇಲು ಸೇತುವೆ ನಿರ್ಮಾಣದಿಂದ ದ್ವಿಮುಖ ಸಂಚಾರಕ್ಕೆ ಅವಕಾಶ ಕಲ್ಪಿಸುವ ಯೋಜನೆಯಿದ್ದು, ದಕ್ಷಿಣ ಭಾಗದ ಸಾರ್ವಜನಿಕರಿಗೆ ಸುಲಭ ಸಂಚಾರಕ್ಕೆ ಅನುಕೂಲ ಮಾಡಿಕೊಡಬಹುದಾಗಿರುತ್ತದೆ ಮತ್ತು ಈ ರಸ್ತೆಯಲ್ಲಿ ವಾಹನ ದಟ್ಟಣೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದಾಗಿದೆ. ಮತ್ತು ಹಡ್ಸನ್ ವೃತ್ತದಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ ಮಾಡುವುದರೊಂದಿಗೆ ಈ ಜಂಕ್ಷನ್‌ನಲ್ಲಿ ಸುಗಮ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ.

ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕೆಳಕಂಡ ಕೆಲಸಗಳನ್ನು ತ್ವರಿತವಾಗಿ ಕೈಗೊಳ್ಳಬೇಕಾಗಿದೆ.

1. Topographical Survey.
2. Traffic count and to prepare "Traffic Analysis Report"
3. Soil Investigation.
4. Study of different alternatives using "Composite Construction"
5. Economic Ayalysis for different options.
6. Preparation of Power Point Presentations.

ಮೇಲ್ಕಂಡ ಸೇವೆಗಳಿಗಾಗಿ ತ್ವರಿತವಾಗಿ ಸಂಭವನೀಯ ವರದಿ ಸಿದ್ಧಪಡಿಸಲು ಸಲಹೆಗಾರರಾದ ಮೆ॥ ನಾಗೇಶ್ ಕನ್ಸಲ್ಟೆಂಟ್ಸ್ ರವರನ್ನು ಸಲಹೆಗಾರರನ್ನಾಗಿ ನೇಮಕ ಮಾಡಲು ಉದ್ದೇಶಿಸಲಾಗಿದೆ.

ಮೇಲಿನ ಹಿನ್ನಲೆಯಲ್ಲಿ ಕರ್ನಾಟಕ ಪಾರದರ್ಶಕ ಅಧಿನಿಯಮ 1999 ರಂತೆ 28ಇ ರೀತ್ಯ ಮೆ॥ನಾಗೇಶ್ ಕನ್ಸಲ್ಟೆಂಟ್ಸ್ ರವರನ್ನು ನೇರ ನೇಮಕ ಮಾಡುವ ಬಗ್ಗೆ ಮತ್ತು ಇವರ ಶುಲ್ಕ ರೂ.4.90 ಲಕ್ಷಗಳು (ಸೇವಾ ಶುಲ್ಕ ಸೇರಿ) ನಿಗಧಿಪಡಿಸುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/07/2008ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು

ವಿಷಯ ಸಂಖ್ಯೆ:214/2008–09

Improvements and Asphalting to Subramanyapura main road from Uttarahalli main road Kanakapura road via Gubbalalu in Subramanyapura Sub-Division.

ಪ್ರಸ್ತಾವನೆ:

Improvements and Asphalting to Subramanyapura main road from Uttarahalli main road Kanakapura road via Gubbalalu in Subramanyapura Sub-Division ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ರಾಜರಾಜೇಶ್ವರಿನಗರ) ರವರು ಮೊದಲನೇ ಕರೆಯಲ್ಲಿ ಟೆಂಡರ್ ಅಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 04 ಟೆಂಡರ್‌ಗಳು ಸ್ವೀಕೃತವಾಗಿದ್ದು, 04 (ನಾಲ್ಕು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ರಾಜರಾಜೇಶ್ವರಿನಗರ) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಸಿ.ಪಿ.ಉಮೇಶ್, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.49.88 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007–08 ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.49,37,949.67 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಸಿ.ಪಿ.ಉಮೇಶ್ ರವರು ಶೇಕಡ 39.10% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ರಾಜರಾಜೇಶ್ವರಿನಗರ) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ನಮೂದಿಸಿದ ದರಗಳಾದ ಶೇಕಡ 29.18% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಡಾಂಬರಿನ ವ್ಯತ್ಯಾಸದ ದರವನ್ನು ಪರಿಗಣಿಸಿ ಬಂದಂತಹ ಶೇಕಡ 14.45% ಹೆಚ್ಚಿನ ದರಗಳು ಕಂಡು ಬಂದಿರುತ್ತದೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ರಾಜರಾಜೇಶ್ವರಿನಗರ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.63,78,953.96 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ ಯು.ಡಿ.ಡಿ/116/ಎಹೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರವರು/ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಸಿ.ಪಿ.ಉಮೇಶ್ ರವರು 2007–08 ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಸಂಧಾನದ ನಂತರ ನಮೂದಿಸಿದ ದರಗಳಿಗೆ ಡಾಂಬರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.45 ರಷ್ಟು ಹೆಚ್ಚುವರಿ ದರಗಳು ಅಥವಾ ರೂ.63,78,953.96 (ರೂ.ಅರವತ್ತ ಮೂರು ಲಕ್ಷದ ಎಪ್ಪತ್ತೆಂಟು ಸಾವಿರದ ಒಂಬೈನೂರ ಐವತ್ತ ಮೂರು ಮತ್ತು ಪೈಸೆ ತೊಂಭತ್ತಾರು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು

**ವಿಷಯ ಸಂಖ್ಯೆ:314/2008-09**

ಸಾರ್ವಜನಿಕ ಭಾಗವಹಿಸುವಿಕೆ ಆಧಾರದಲ್ಲಿ ನಗರದ ವಿವಿಧ ಪ್ರದೇಶಗಳಲ್ಲಿ ಪಾಲಿಕೆಗೆ ಸೇರಿರುವ ಸ್ವತ್ತುಗಳಲ್ಲಿ ವಾಹನಗಳ ನಿಲುಗಡೆ ಕುರಿತು ಸವಿವರವಾದ ಯೋಜನೆಯ ವರದಿಯನ್ನು ತಯಾರಿಸುವ ಬಗ್ಗೆ.

**ಪ್ರಸ್ತಾವನೆ:**

ಸಾರ್ವಜನಿಕ ಭಾಗವಹಿಸುವಿಕೆ ಆಧಾರದಲ್ಲಿ ನಗರದ ವಿವಿಧ ಪ್ರದೇಶಗಳಲ್ಲಿ ಪಾಲಿಕೆಗೆ ಸೇರಿರುವ ಸ್ವತ್ತುಗಳಲ್ಲಿ ವಾಹನಗಳ ನಿಲುಗಡೆ ಕುರಿತು ಸವಿವರವಾದ ಯೋಜನೆಯ ವರದಿಯನ್ನು ತಯಾರಿಸಲು ಈಗಾಗಲೇ Swill Challenge ಅಡಿಯಲ್ಲಿ ಸ್ವಯಂ ಪ್ರೇರಿತ ಪ್ರಸ್ತಾವನೆಯನ್ನು M/s Subhash Project & Marketing Ltd., ರವರು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡ 6 ಸ್ಥಳಗಳಲ್ಲಿ ವಾಹನ ನಿಲುಗಡೆ ಸೌಕರ್ಯಕ್ಕೆ ಸಂಬಂಧಪಟ್ಟಂತೆ ಡಿ.ಪಿ.ಆರ್. ಸಿದ್ಧಪಡಿಸಿ, 60 ದಿನಗಳ Exclusivity period ಅವಧಿಯನ್ನು ಕೊಡುವ ಬಗ್ಗೆ ಮಾನ್ಯ ಆಡಳಿತಗಾರರು ಅನುಮೋದಿಸಿರುತ್ತಾರೆ. ಈ ವಿಷಯಕ್ಕೆ ಸಂಬಂಧಿಸದಂತೆ M/s Subhash Project & Marketing Ltd., ರವರ ಪಿ.ಪಿ.ಪಿ ಯೋಜನೆ ಅಡಿಯಲ್ಲಿ Swill Challenge ನಿಯಮದ ಪ್ರಕಾರ ಕೊಟ್ಟಿರುವ ಡಿ.ಪಿ.ಆರ್. ಕರಡು Tender document ಹಾಗೂ Concession agreement ಅನ್ನು ಪರಿಶೀಲಿಸಿ ಮೌಲ್ಯ ಮಾಪನ ಮಾಡಲು ಈ ಸೇವೆಯನ್ನು ತುರ್ತು ಪರಿಗಣಿಸಿ ಈಗಾಗಲೇ M/s Torsteel Research foundation in India ರವರಿಗೆ ವಹಿಸಲಾಗಿರುತ್ತದೆ. M/s Torsteel Research foundation in India ರವರು ಸದರಿ ಸೇವೆಗೆ ರೂ.4,00,000/- (Lump sum) + Service tax @ 12.36% ಗಳನ್ನು ನಮೂದಿಸಿ ದಿನಾಂಕ:21/04/2008 ರಂದು ಪತ್ರ ನೀಡಿರುತ್ತಾರೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಅನುಮೋದನೆ ಕೋರಿದೆ.

1. M/s Subhash Project & Marketing Ltd., ರವರು ಪಿ.ಪಿ.ಪಿ. ಯೋಜನೆಯಡಿಯಲ್ಲಿ Swill Challenge ನೀಡಿರುವ ಕರಡು ಡಿ.ಪಿ.ಆರ್,Tender document ಹಾಗೂ Concession agreement ಅನ್ನು M/s Torsteel Research foundation in Indaia ರವರು ಮೌಲ್ಯ ಮಾಪನ ಮಾಡುವ ಸೇವೆಗೆ ನಮೂದಿಸಿರುವ ರೂ.4,00,000/- (Lump sum) + Service tax @ 12.36% ಗೆ ಅನುಮೋದನೆ.
2. ಈಗಾಗಲೇ ಸದರಿ ಸೇವೆ ತುರ್ತು ಆಗಿರುವ ಪ್ರಯುಕ್ತ M/s Torsteel Research foundation in India ರವರನ್ನು ನೇಮಿಸುವ ಕ್ರಮಕ್ಕೆ ಕೆ.ಟಿ.ಪಿ.ಪಿ. ಕಾಯ್ದೆ 28E ಅಡಿಯಲ್ಲಿ ಅನುಮೋದನೆ.

ಮೇಲ್ಕಂಡಂತೆ ಅನುಮೋದನೆ ಕೋರಿ, ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09/07/2008 ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:09/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:318/2008-09**

ಬಳ್ಳಾರಿ ರಸ್ತೆಯ ಸಂಜಯನಗರ ವೃತ್ತದಲ್ಲಿ ವಾಹನ ಸುರಂಗ ಮಾರ್ಗಕ್ಕೆ ಎದುರು ರಸ್ತೆ ನಿರ್ಮಿಸಲು ಬೇಕಾದ ಆರ್.ಸಿ.ಸಿ. ಪ್ರಿಕ್ಯಾಸ್ಟ್ 3.0x2.20x1.0 ಅಳತೆಯ ಬಾಕ್ಸ್‌ಗಳನ್ನು ಒದಗಿಸುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ರಸ್ತೆಯ ಸಂಜಯನಗರ ವೃತ್ತದಲ್ಲಿ ಆರ್.ಸಿ.ಸಿ. ಪ್ರಿಕ್ಯಾಸ್ಟ್ ಬಾಕ್ಸ್‌ಗಳನ್ನು ಉಪಯೋಗಿಸಿಕೊಂಡು ವಾಹನ ಸುರಂಗ ಮಾರ್ಗ ನಿರ್ಮಿಸುವ ನಿಟ್ಟಿನಲ್ಲಿ, ಸದರಿ ಸುರಂಗ ಮಾರ್ಗಕ್ಕೆ ಎದುರು ರಸ್ತೆಗಳನ್ನು ನಿರ್ಮಿಸಲು ಆರ್.ಸಿ.ಸಿ. ಪ್ರಿಕ್ಯಾಸ್ಟ್ 3.0x2.20x1.0 ಅಳತೆಯ ಬಾಕ್ಸ್‌ಗಳನ್ನು ಸ್ಥಳಕ್ಕೆ ಒದಗಿಸಿ ಅವುಗಳನ್ನು ಒಂದರ ಮೇಲೆ ಒಂದರಂತೆ ಜೋಡಿಸಿ, ಪಕ್ಕದಲ್ಲಿ ಜೋಡಿಸಲು ಅನುಮೋದನೆಗೊಂಡ ಡೇಟರೇಟನ್ನು ಅಳವಡಿಸಿಕೊಂಡು ಅಂದಾಜುಪಟ್ಟಿಯನ್ನು ರೂ.97.00 ಲಕ್ಷಗಳಿಗೆ ತಯಾರಿಸಲಾಗಿದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ.97.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:319/2008-09**

ಬಳ್ಳಾರಿ ರಸ್ತೆಯ ಸಂಜಯನಗರ ವೃತ್ತದಲ್ಲಿ ವಾಹನ ಸುರಂಗ ಮಾರ್ಗಕ್ಕೆ ಎದುರು ರಸ್ತೆ ನಿರ್ಮಿಸುವ ಕಾಮಗಾರಿಯ ಬಗ್ಗೆ.

**ಟಿಪ್ಪಣಿ:**

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ರಸ್ತೆಯ ಸಂಜಯನಗರ ವೃತ್ತದಲ್ಲಿ ವಾಹನ ಸುರಂಗ ಮಾರ್ಗ ನಿರ್ಮಿಸಲು ಉದ್ದೇಶಿಸಿದ್ದು, ಸದರಿ ವಾಹನ ಸುರಂಗ ಮಾರ್ಗಕ್ಕೆ ಎದುರು ರಸ್ತೆ ನಿರ್ಮಿಸಲು ಅಂದಾಜುಪಟ್ಟಿ ತಯಾರಿಸಲಾಗಿದೆ. ಹಿಂದೆ ಸದರಿ ಎದುರು ರಸ್ತೆಗಳನ್ನು ಸಾಯಿಲ್ ನೈಲಿಂಗ್ ಮಾಡಿ ನಿರ್ಮಿಸಲು ಅನುಮೋದನೆ ಪಡೆಯಲಾಗಿತ್ತು. ಆದರೆ, ಟೆಂಡರ್ ಅವಧಿ ಮುಗಿದಿದ್ದು ಸದರಿ ಟೆಂಡರ್‌ಗಳನ್ನು ರದ್ದುಗೊಳಿಸಲಾಗಿದೆ. ಎದುರು ರಸ್ತೆಯನ್ನು ಇನ್ನು ಗಟ್ಟಿ ಮುಟ್ಟಾಗಿ ದೀರ್ಘ ಬಾಳಿಕೆ ಬರುವಂತೆ ನಿರ್ಮಿಸಲು ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಲೋಕೊಪಯೋಗಿ ಇಲಾಖೆ ದರಪಟ್ಟಿ ಅನ್ವಯ ರೂ.66.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.66.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧಿಕಾರವನ್ನು ಚಲಾಯಿಸಿ**
**ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು**

ವಿಷಯದ ಸಂಖ್ಯೆ:320/2008-09

ಬಳ್ಳಾರಿ ರಸ್ತೆಯ ಸಂಜಯನಗರ ವೃತ್ತದಲ್ಲಿ ವಾಹನ ಸುರಂಗ ಮಾರ್ಗ ನಿರ್ಮಿಸಲು ಆರ್.ಸಿ.ಸಿ. ಪ್ರಿಕ್ಯಾಸ್ಟ್ ಎಲಿಮೆಂಟ್‌ಗಳನ್ನು ಅಗೆದಿರುವ ಸ್ಥಳದಲ್ಲಿ ಇಳಿಸುವುದು ಮತ್ತು ಇತರೆ ಕಾಮಗಾರಿಗಳ ಬಗ್ಗೆ.

ಪ್ರಸ್ತಾವನೆ:

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ರಸ್ತೆಯ ಸಂಜಯನಗರ ವೃತ್ತದಲ್ಲಿ, ವಾಹನ ಸುರಂಗ ಮಾರ್ಗ ನಿರ್ಮಿಸಲು ಪ್ರಿಕ್ಯಾಸ್ಟ್ ಆರ್.ಸಿ.ಸಿ. ಬಾಕ್ಸ್‌ಗಳನ್ನು ಅಗೆದಿರುವ ಸ್ಥಳದಲ್ಲಿ ಸರಿಯಾದ ಸಾಮರ್ಥ್ಯವುಳ್ಳ ಕ್ರೇನ್‌ಗಳನ್ನು ಉಪಯೋಗಿಸಿ ಇಳಿಸುವುದು ಹಾಗೂ ಇತರೆ ಸಂಬಂಧಪಟ್ಟ ಕಾಮಗಾರಿಗಳನ್ನು 2007-08 ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ವಯ ರೂ.41.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.41.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು

**ವಿಷಯದ ಸಂಖ್ಯೆ:321/2008–09**

ವಾರ್ಡ್:61,62,63,65,66, ರಲ್ಲಿನ ತುರ್ತು ಕಾಮಗಾರಿಗಳನ್ನು ಇಲಾಖಾವತಿಯಿಂದ ತೆಗೆದುಕೊಂಡಿರುವ ಬಗ್ಗೆ.

**ಪ್ರಸ್ತಾವನೆ:**

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಗಳಲ್ಲಿ) | ವರ್ಕ್ ಕೋಡ್ ನಂಬರ್ | ಗುತ್ತಿಗೆದಾರರ ಹೆಸರು | ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ ಹಾಗೂ ದಿನಾಂಕ | ತಾಂತ್ರಿಕ ಮಂಜೂರಾತಿ ಸಂಖ್ಯೆ ಹಾಗೂ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| [illegible] | Providing painting to Kerb stone and median under Suvarna B'lore. in Ward No.61 | 54,000/– | 061-07-IV-E-R-KP-001 | ಇಲಾಖಾವತಿ | EE/JN/AE/AA61/66/06-07. Date:30-03-2007 | EE/JN/AE/TS 58/49/06-07 Date: 30-03-2007 |
| [illegible] | Painting to Kerb stone and median under Suvarna Bangalore Programme in Ward No.63 | 53,596/– | 063-07-NG-E-V-GS-001 | ಇಲಾಖಾವತಿ | EE/JN/AE/AA63/117/06-07 Date:30-03-2007 | EE/JN/AE/TS 57/49 06-07 Date: 30-03-2007 |
| [illegible] | Painting to Kerb stone and median under Suvarna Bangalore in Ward No. 62 | 75,370/– | 063-07-NG-E-V-GS-001 | ಇಲಾಖಾವತಿ | EE/JN/AE/AA62/116/06-07. Date:30-03-2007 | EE/JN/AE/TS 56/49/ 06-07 Date:30-03-2007 |
| [illegible] | Depot collection of material in ward no.65 | 2,00,000/– | 063-07-M-N-E-R-MI-002 | ಇಲಾಖಾವತಿ | EE/JN/AE/AA28/73/06-07. Date:23-03-2007 | EE/JN/AE/TS/ 58/44/47/06-07 Date: 23-03-2007 |
| [illegible] | Engaging private labours for maintance of road drains and footpath in Ward no.63 | 2,00,000/– | 063-07-M-N-E-R-MI-002 | ಇಲಾಖಾವತಿ | EE/JN/AE/AA 63/77/06-07. Date:23-03-2007 | EE/JN/AE/TS 45/47 06-07 Date: 23-03-2007 |
| [illegible] | Depot collection for the year 2006-07 in Ward No.65 | 2,00,000/– | 065-07-M-N-E-R-MI-001 | ಇಲಾಖಾವತಿ | EE/JN/AE/AA 65/108/06-07. Date:23-03-2007 | EE/JN/AE/TS/42/47 06-07 Date: 23-03-2007 |
| [illegible] | Improvements to foot path, road side drains and Painting to kerbs at Hosur Road from Tavarekere main road junction to Madiwala Checkpost and Sarjapur Road from St.Johns Hospital to Kendria Sadana in ward no.66. | 1,85,000/– | 006-07-I-G-R-IM-001 | ಇಲಾಖಾವತಿ | EE/JN/AE/AA 66/110/06-07. Date:29-03-2007 | EE/JN/AE/TS/50/48/ 06-07 Date:29-03-2007 |
| [illegible] | Improvements to foot path, road side drains shoulders and painting to kerbs at Maruthinagar main to Hosur Road junction to SWD and 8th cross BTM 1st stage in ward no.66. | 2,00,000/– | 066-07-I-G-E-R-IM-002 | ಇಲಾಖಾವತಿ | EE/JN/AE/AA 66/111/06-07. Date:29-03-2007 | EE/JN/AE/TS/51/48/ 06-07 Date:29-03-2007 |

. . . 2

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು

ವಿಷಯದ ಸಂಖ್ಯೆ:321/2008–09

ವಾರ್ಡ್:61,62,63,65,66, ರಲ್ಲಿನ ತುರ್ತು ಕಾಮಗಾರಿಗಳನ್ನು ಇಲಾಖಾವತಿಯಿಂದ ತೆಗೆದುಕೊಂಡಿರುವ ಬಗ್ಗೆ.

**ಪ್ರಸ್ತಾವನೆ:**

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಗಳಲ್ಲಿ) | ವರ್ಕ್ ಕೋಡ್ ನಂಬರ್ | ಗುತ್ತಿಗೆದಾರರ ಹೆಸರು | ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ ಹಾಗೂ ದಿನಾಂಕ | ತಾಂತ್ರಿಕ ಮಂಜೂರಾತಿ ಸಂಖ್ಯೆ ಹಾಗೂ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | Providing painting to Kerb stone and median under Suvarna B'lore. in Ward No.61 | 54,000/– | 061-07-IV-E-R-KP-001 | ಇಲಾಖಾವತಿ | EE/JN/AE/AA61/66/06-07. Date:30-03-2007 | EE/JN/AE/TS 58/49/06-07 Date: 30-03-2007 |
| 2 | Painting to Kerb stone and median under Suvarna Bangalore Programme in Ward No.63 | 53,596/– | 063-07-NG-E-V-GS-001 | ಇಲಾಖಾವತಿ | EE/JN/AE/AA63/117/06-07 Date:30-03-2007 | EE/JN/AE/TS 57/49 06-07 Date: 30-03-2007 |
| 3 | Painting to Kerb stone and median under Suvarna Bangalore in Ward No. 62 | 75,370/– | 063-07-NG-E-V-GS-001 | ಇಲಾಖಾವತಿ | EE/JN/AE/AA62/116/06-07. Date:30-03-2007 | EE/JN/AE/TS 56/49/ 06-07 Date:30-03-2007 |
| 4 | Depot collection of material in ward no.65 | 2,00,000/– | 063-07-M-N-E-R-MI-002 | ಇಲಾಖಾವತಿ | EE/JN/AE/AA28/73/06-07. Date:23-03-2007 | EE/JN/AE/TS/ 58/44/47/06-07 Date: 23-03-2007 |
| 5 | Engaging private labours for maintance of road drains and footpath in Ward no.63 | 2,00,000/– | 063-07-M-N-E-R-MI-002 | ಇಲಾಖಾವತಿ | EE/JN/AE/AA 63/77/06-07. Date:23-03-2007 | EE/JN/AE/TS 45/47 06-07 Date: 23-03-2007 |
| 6 | Depot collection for the year 2006-07 in Ward No.65 | 2,00,000/– | 065-07-M-N-E-R-MI-001 | ಇಲಾಖಾವತಿ | EE/JN/AE/AA 65/108/06-07. Date:23-03-2007 | EE/JN/AE/TS/42/47 06-07 Date: 23-03-2007 |
| 7 | Improvements to foot path, road side drains and Painting to kerbs at Hosur Road from Tavarekere main road junction to Madiwala Checkpost and Sarjapur Road from St.Johns Hospital to Kendria Sadana in ward no.66. | 1,85,000/– | 006-07-I-G-R-IM-001 | ಇಲಾಖಾವತಿ | EE/JN/AE/AA 66/110/06-07. Date:29-03-2007 | EE/JN/AE/TS/50/48/ 06-07 Date:29-03-2007 |
| 8 | Improvements to foot path, road side drains shoulders and painting to kerbs at Maruthinagar main to Hosur Road junction to SWD and 8th cross BTM 1st stage in ward no.66. | 2,00,000/– | 066-07-I-G-E-R-IM-002 | ಇಲಾಖಾವತಿ | EE/JN/AE/AA 66/111/06-07. Date:29-03-2007 | EE/JN/AE/TS/51/48/ 06-07 Date:29-03-2007 |

62

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



| | | | | | | |
|---|---|---|---|---|---|---|
| 9 | Improvements to foot path, road side drain shoulders and Painting to kerbs from Kendriya Sadana to Krupanidhi College in ward no.66. | 2,00,000/- | 066-07-I-G-E-R-IM-003 | ಇಲಾಖಾವತಿ | EE/JN/AE/AA 34/74/06-07. Date:29-03-2007 | EE/JN/AE/TS/53/ 48/ 06-07 Date:29-03-2007 |
| 10 | Improvements to foot path, road side drain shoulders and Painting to kerbs at Housr road from Madiwala police station to Ayyappa temple in ward no.66. | 2,00,000/- | 066-07-I-G-E-R-IM-004 | ಇಲಾಖಾವತಿ | EE/JN/AE/AA 35/74/06-07. Date:29-03-2007 | EE/JN/AE/TS/66/ 113/06-07 Date:29-03-2007 |
| 11 | Improvements to foot path, road side drain shoulders and Painting to kerbs from Ayyappa temple to Madiwala Check post in Ward no.66. | 2,00,000/- | 066-07-I-G-E-R-IM-005 | ಇಲಾಖಾವತಿ | EE/JN/AE/AA 66/114/06-07. Date:29-03-2007 | EE/JN/AE/TS/55/ 49/ 06-07 Date:29-03-2007 |

ಮೇಲ್ಕಂಡ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ಪಡೆಯಲಾಗಿದ್ದು, ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಪಡೆಯಲಾಗಿದೆ. ಮೇಲ್ಕಂಡ ಕಾಮಗಾರಿಗಳು ರೂ.2.00 ಲಕ್ಷಗಳ ಒಳಗಿದ್ದು, ಕಾರ್ಯಪಾಲಕ ಅಭಿಯಂತರರು (ಜಯನಗರ) ರವರ ವಿಭಾಗದ 2006-07ನೇ ಸಾಲಿನಲ್ಲಿ ಮೇಲಾಧಿಕಾರಿಗಳ ಆದೇಶದಂತೆ ತುರ್ತಾಗಿ ಕಾಮಗಾರಿಗಳನ್ನು ಇಲಾಖಾವತಿಯಿಂದ ತೆಗೆದುಕೊಂಡಿರುತ್ತಾರೆ.

ಮೇಲ್ಕಂಡ ಕಾಮಗಾರಿಗಳು 2006-07ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿದ್ದು, ಸದರಿ ಕಾಮಗಾರಿಗಳನ್ನು ಅನುಮೋದನೆ ನಿರೀಕ್ಷಿಸಿ ಇಲಾಖಾವತಿಯಿಂದ ಕೈಗೊಂಡು ನಿರ್ವಹಿಸಿರುವುದಾಗಿ ಕಾರ್ಯಪಾಲಕ ಅಭಿಯಂತರರು (ಜಯನಗರ) ರವರು ತಿಳಿಸಿರುವಂತೆ ಮುಖ್ಯ ಅಭಿಯಂತರರು (ದಕ್ಷಿಣ) ರವರು ಈ ಕೆಲಸವನ್ನು 2006-07ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರ ಪಟ್ಟಿಯಂತೆ ಇಲಾಖಾವತಿಯಿಂದ ತೆಗೆದುಕೊಂಡಿರುವುದನ್ನು ಮನಗೊಂಡು ಕಾಮಗಾರಿಗೆ ಸಂಬಂಧಪಟ್ಟ ಪ್ರಗತಿಯ ಛಾಯ ಚಿತ್ರಗಳೊಂದಿಗೆ, ಕೈಗೊಂಡಿರುವ ಕ್ರಮವನ್ನು ತಾಂತ್ರಿಕ ಜಾಗೃತ ದಳ ಕೋಶದಿಂದ ಅಭಿಪ್ರಾಯವನ್ನು ಪಡೆದ ನಂತರ ಸದರಿ ಕಾಮಗಾರಿಗಳನ್ನು ಈಗಾಗಲೇ ತೆಗೆದುಕೊಂಡ ಪೂರ್ಣಗೊಳಿಸಿರುವ ಪ್ರಸ್ತಾವನೆಯನ್ನು ಸ್ಥಿರೀಕರಿಸಲು ಕೋರಿರುತ್ತಾರೆ. ಈ ಪ್ರಸ್ತಾವನೆಗೆ ಮುಖ್ಯ ಅಭಿಯಂತರರು (ದಕ್ಷಿಣ) ರವರು ಒಪ್ಪಿಗೆ ನೀಡಿದ್ದು, ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮೇಲ್ಕಂಡ ಕಾಮಗಾರಿಗಳನ್ನು ನಮುದಿಸಿರುವಂತೆ ಇಲಾಖಾವತಿಯಿಂದ ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ : 17–07–2008 ನಡವಳಿಗಳು**

**ವಿಷಯದ ಸಂಖ್ಯೆ: 334 / 08–09.**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿಧಾನ ಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯಿಂದ, ಹಾಲಿ ಇರುವ 8 ವಲಯ ಸರಹದ್ದುಗಳನ್ನು ಪುನರ್ ರಚಿಸುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಯಿಂದ ಅನೇಕ ವಿಧಾನಸಭಾ ಕ್ಷೇತ್ರಗಳು ಬೇರೆ ಬೇರೆ ವಲಯಗಳಲ್ಲಿ ಹಂಚಿ ಹೋಗಿರುತ್ತದೆ. ಇದರಿಂದ ಪ್ರತಿ ನಿತ್ಯ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಹಾಗೂ ಆಡಳಿತಾತ್ಮಕ ವಿಚಾರಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರುಗಳು ಅನೇಕ ಸಭೆಗಳಲ್ಲಿ ಪ್ರಸ್ತಾಪಿಸಿರುತ್ತಾರೆ. ಕಾಮಗಾರಿ ಇಲಾಖೆಯ ವಾರ್ಡ್‌ಗಳು, ಉಪವಿಭಾಗಗಳು ಮತ್ತು ವಿಭಾಗಗಳನ್ನು ಸೂಕ್ತ ರೀತಿಯಲ್ಲಿ ಪುನರ್‌ರಚಿಸಿ ವಿಭಾಗಗಳು, ಉಪವಿಭಾಗಗಳು ಮತ್ತು ವಾರ್ಡ್‌ಗಳು ಒಂದೇ ವಲಯದ ಕಾರ್ಯವ್ಯಾಪ್ತಿಯಲ್ಲಿ ಬರುವಂತೆ ಹಾಗೂ ಪೂರ್ಣ ವಿಧಾನಸಭಾ ಕ್ಷೇತ್ರದಲ್ಲಿ ಒಂದೇ ವಯಲದ ವ್ಯಾಪ್ತಿಗೆ ಒಳಪಡುವಂತೆ ಸರಹದ್ದುಗಳನ್ನು ಪುನರ್ ರಚಿಸುವ ಬಗ್ಗೆ ಸೂಚಿಸಿರುತ್ತಾರೆ.

ಈ ಮೇರೆಗೆ ವಿಶೇಷ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಹಾಲಿ 8 ವಲಯಗಳನ್ನು ಸೂಕ್ತ ರೀತಿಯಲ್ಲಿ ಪುನರ್‌ರಚಿಸಿ ಪ್ರಸ್ಥಾವನೆ ಸಲ್ಲಿಸಲು ಸೂಚಿಸಲಾಯಿತು.

ಇಸವಿ 2007 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನಾಗಿ ಮಾರ್ಪಡಿಸಿ ಹಾಲಿ ಇದ್ದ 225 ಚ.ಕಿ.ಮಿ ಜೊತೆಗೆ ಹೆಚ್ಚುವರಿಯಾಗಿ 7 ನಗರ ಸಭೆಗಳು, 1 ಪುರಸಭೆ ಮತ್ತು 110 ಹಳ್ಳಿಗಳು ಸೇರ್ಪಡೆಗೊಳಿಸಿ ಸರ್ಕಾರವು ಅಧಿಸೂಚನೆ ಹೊರಡಿಸಿದ್ದರ ಮೇರೆಗೆ ಈಗಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯು ಸುಮಾರು 800.47 ಚ.ಕಿ.ಮಿ ಆಗಿರುತ್ತದೆ.

ಪುನರ್ ವಿಂಗಡಣೆಗೆ ಮೊದಲು ಇದ್ದ ವಿಧಾನಸಭಾ ಕ್ಷೇತ್ರದ ಪ್ರದೇಶಗಳು ಬೇರೆ ಬೇರೆ ವಿಧಾನಸಭಾ ಕ್ಷೇತ್ರಗಳಲ್ಲಿ ಹಂಚಿಹೋಗಿದ್ದು ದಿನನಿತ್ಯ ಕೆಲಸ ಕಾರ್ಯಗಳಿಗೆ ಸಂಬಂಧಪಟ್ಟಂತೆ ಮಾನ್ಯ ಶಾಸಕರುಗಳು 2–3 ವಲಯಗಳು ಹಾಗೂ ಬೇರೆ ಬೇರೆ ಕಾಮಗಾರಿ ವಿಭಾಗಗಳನ್ನು ಸಂಪರ್ಕಿಸಬೇಕಾಗಿರುತ್ತದೆ. ಇದರಿಂದ ಆಗಬಹುದಾದ ಅಡಚಣೆಗಳನ್ನು ಸರಿಪಡಿಸುವ ದೃಷ್ಟಿಯಿಂದ ಹಾಲಿ

ಸದರಿ ಪ್ರಸ್ತಾವನೆಯ ಮುಂದುವರೆದ ಭಾಗವು
ಪುಟ ಸಂಖ್ಯೆ: 76 ರಿಂದ 82 ರವರೆಗೆ ಲಗತ್ತಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು

**ವಿಷಯದ ಸಂಖ್ಯೆ:325/2008-09**

ಭಾರತೀಯ ದಕ್ಷಿಣ ರೈಲ್ವೆ ಇಲಾಖೆಗೆ ಸೇರಿದ ನಿವೇಶವನ್ನು ನಗರಪಾಲಿಕೆಯು ಉಪಯೋಗಿಸಿಕೊಂಡಿದ್ದು ಅದರ ಬದಲಾಗಿ ನಗರ ಪಾಲಿಕೆ ನಿವೇಶನವನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಸ್ತೆಯನ್ನು ಅಗಲೀಕರಣ ಮಾಡಲು ಮತ್ತು ಮೇಲು ಸೇತುವೆ/ಕೆಳಸೇತುವೆಯನ್ನು ನಿರ್ಮಿಸುವ ಸಲುವಾಗಿ ಭಾರತೀಯ ರೈಲ್ವೆ ಇಲಾಖೆಗೆ ಸೇರಿದ್ದ ಜಯಮಹಲ್ ಬಳಿ ಇರುವ ನಿವೇಶವನ್ನು ಉಪಯೋಗಿಸಿಕೊಂಡಿದ್ದು, ಇದಕ್ಕೆ ಬದಲಾಗಿ ರೈಲ್ವೆ ಇಲಾಖೆಗೆ ನಗರ ಪಾಲಿಕೆಯ ನಿವೇಶವನ್ನು ಹಸ್ತಾಂತರಿಸಬೇಕಾಗಿದ್ದು ಈ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ನಗರಾಭಿವೃದ್ಧಿ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ವಿವಿಧ ದಿನಾಂಕಗಳಂದು ಸಭೆಗಳನ್ನು ನಡೆಸಿ ಚರ್ಚಿಸಲಾಗಿರುತ್ತದೆ.

ಹೀಗೆ ನಗರಾಭಿವೃದ್ಧಿ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಅನುಸಾರ ನಗರ ಪಾಲಿಕೆಯ ವಿಶೇಷ ಆಯುಕ್ತರು (ಯೋಜನೆ), ವಿಶೇಷ ಆಯುಕ್ತರು (ಆಡಳಿತ) ಹಾಗೂ ಕಾಲೇಜು ಶಿಕ್ಷಣ ನಿರ್ದೇಶನಾಲಯದ ಮುಖ್ಯ ಆಡಳಿತಗಾರರು ಬಿ.ಬಿ.ಎಂ.ಪಿ.ಗೆ ಸೇರಿದ 3 ಸ್ವತ್ತುಗಳ ಪರಿಶೀಲನೆ ಮಾಡಿ 3 ಸ್ವತ್ತುಗಳ ಪೈಕಿ ಕಮೀಷನರೇಟ್ ರಸ್ತೆಯಲ್ಲಿನ ಬಿ.ಬಿ.ಎಂ.ಪಿ.ಗೆ ಸೇರಿದ ಸಿ.ಟಿ.ಎಸ್.ಸಂಖ್ಯೆ:739 ರ ವಿಸ್ತೀರ್ಣ 815.4 ಚದರ ಮೀಟರ್ ನಿವೇಶನವು ಎಲ್ಲಾ ದೃಷ್ಟಿಯಿಂದಲೂ ಯಾವುದೇ ರೀತಿಯ ಋಣಭಾರ ಇರುವುದಿಲ್ಲವೆಂದು ಸರ್ಕಾರಕ್ಕೆ ಸ್ಪಷ್ಟ ಪಡಿಸಲಾಗಿರುತ್ತದೆ.

ದಿನಾಂಕ:13/05/2008 ರಂದು ನಗರಾಭಿವೃದ್ಧಿ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆಗೆ ಸೇರಿದ ಶೇಷಾದ್ರಿ ರಸ್ತೆಯಲ್ಲಿರುವ ಶಿಕ್ಷಣ ಇಲಾಖೆಯ ಪ್ರಾಂತೀಯ ಜಂಟಿ ನಿರ್ದೇಶಕರ ಕಛೇರಿಯನ್ನು ರೈಲ್ವೆ ಇಲಾಖೆಗೆ ಖಾಯಂ ಆಗಿ ವರ್ಗಾಯಿಸಲು ತೀರ್ಮಾನವನ್ನು ಮಾಡಲಾಗಿರುತ್ತದೆ. ಇದಕ್ಕೆ ಬದಲಾಗಿ ಕಮೀಷನರೇಟ್ ರಸ್ತೆಯಲ್ಲಿ ಬಿ.ಬಿ.ಎಂ.ಪಿ.ಗೆ ಸೇರಿದ ಸಿ.ಟಿ.ಎಸ್.ಸಂಖ್ಯೆ:739 ರ ವಿಸ್ತೀರ್ಣ 815.4 ಚದರ ಮೀಟರ್ ಜಾಗವನ್ನು ಮಹಾನಗರ ಪಾಲಿಕೆಯು ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಬಗ್ಗೆ ಕೆ.ಎಂ.ಸಿ.ಕಾಯ್ದೆಯನ್ವಯ ಅವಶ್ಯಕವಿರುವ ನಿರ್ಣಯವನ್ನು ತೆಗೆದುಕೊಂಡು ಸರ್ಕಾರದ ಅನುಮೋದನೆಗಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಆದಕಾರಣ, ಕಮಿಷನರೇಟ್ ರಸ್ತೆಯಲ್ಲಿನ ಬಿ.ಬಿ.ಎಂ.ಪಿ.ಗೆ ಸೇರಿದ ಸಿ.ಟಿ.ಎಸ್.ಸಂಖ್ಯೆ:739 ರ ವಿಸ್ತೀರ್ಣ 815.4 ಚದರ ಮೀಟರ್ ಜಾಗವನ್ನು ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಬಗ್ಗೆ ಸೂಕ್ತ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:329/2008-09**

ಕೆ.ಆರ್.ಪುರಂ ಗ್ರಾಮ ಠಾಣಕ್ಕೆ ಸೇರಿದ ಖಾತೆ ನಂ:421/1 ರ 30X25 ವಿಸ್ತೀರ್ಣದ ಆಸ್ತಿಯು ಶ್ರೀಮತಿ.ಜಯಲಕ್ಷ್ಮಿ ಕೋಂ.ಲೇ॥ಯಲ್ಲಪ್ಪ ಇವರಿಗೆ ಸೇರಿದ್ದು, ಇದರಲ್ಲಿ 13 1/2X30 ಅಡಿ ಜಾಗವನ್ನು ರಸ್ತೆಗಾಗಿ ಈಗಾಗಲೇ ಉಪಯೋಗಿಸಿಕೊಂಡು ರಸ್ತೆ ನಿರ್ಮಾಣ ಮಾಡಲಾಗಿದ್ದು, ಇದುವರೆವಿಗೂ ಭೂ-ಸ್ವಾಧೀನ ಪರಿಹಾರ ನೀಡದಿರುವ ಬಗ್ಗೆ.

**ಪ್ರಸ್ತಾವನೆ:**

ಕೃಷ್ಣರಾಜಪುರ ನಗರ ಸಭೆ ವ್ಯಾಪ್ತಿಯಲ್ಲಿ ಬರುವ ಕೆ.ಆರ್.ಪುರ ಗ್ರಾಮಠಾಣದ ಖಾತೇ ನಂ: 421/1 ರ 30X25 ವಿಸ್ತೀರ್ಣದ ಆಸ್ತಿಯು ಶ್ರೀಮತಿ. ಜಯಲಕ್ಷ್ಮಿ ಕೋಂ.ಲೇ॥ಯಲ್ಲಪ್ಪ ಇವರಿಗೆ ಸೇರಿದ್ದು, ಇದರಲ್ಲಿ 13 1/2 X30 ಅಡಿ ಜಾಗವನ್ನು ರಸ್ತೆಗಾಗಿ ಈಗಾಗಲೇ ಉಪಯೋಗಿಸಿಕೊಂಡಿದ್ದು, ಇದುವರೆವಿಗೂ ಭೂ-ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿ ಖಾತೆದಾರರಿಗೆ ಪರಿಹಾರವನ್ನು ಪಾವತಿಸದಿರುವುದರಿಂದ, ಈಗಾಗಲೇ ಉಪಯೋಗಿಸಿಕೊಂಡು ಕಾಮಗಾರಿ ಪೂರ್ಣಗೊಳಿಸಲಾಗಿರುವ ಸ್ವತ್ತಿಗೆ ಭೂಪರಿಹಾರ ನೀಡಲು ಉದ್ದೇಶಿಸಲಾಗಿದೆ.

ಅದರೆ ಸರ್ಕಾರದ ಮಾರ್ಗಸೂಚಿ ಬೆಲೆಯನ್ವಯ ಕೆ.ಆರ್.ಪುರ. ಗ್ರಾಮದಲ್ಲಿ ಚ.ಅ.1ಕ್ಕೆ ರೂ.540/- ಇರುತ್ತದೆ. ಇದರನ್ವಯ ಭೂ-ಸ್ವಾಧೀನಪಡಿಸಿಕೊಂಡಿರುವ 13 1/2X30 ಅಡಿ ನಿವೇಶನಕ್ಕೆ ಅಂದರೆ 405ಚ.ಅ.ಗೆ ಪಾವತಿಸಬೇಕಾದ ಪರಿಹಾರದ ಮೊತ್ತ ಭೂ-ಸ್ವಾಧೀನ ಕಾಯ್ದೆಯಡಿ ಈ ರೀತಿ ಇರುತ್ತದೆ.

**ಅ**

| | |
|---|---|
| 1) ಭೂ-ಸ್ವಾಧೀನಪಡಿಸಿಕೊಳ್ಳಬೇಕಾದ 13 1/2 X30= 405 ಚ.ಅಡಿಗಳಿಗೆ ಚ.ಅ.1ಕ್ಕೆ ಮಾರ್ಗಸೂಚಿ ಬೆಲೆ ರೂ.540/-ಗಳಂತೆ | ರೂ. 2,18,700-00 |
| 2) ಶೇ.30ರಷ್ಟು ಸಲೋಷಿಯಂ | ರೂ. 65,610-00 |
| 3) ಶೇ.12ರಷ್ಟು ಹೆಚ್ಚುವರಿ ಮಾರುಕಟ್ಟೆ ದರ (1ವರ್ಷಕ್ಕೆ) | ರೂ. 26,244-00 |
| ಒಟ್ಟು | ರೂ. **3,10,554-00** |

**ಆ**

| | |
|---|---|
| 1) ಶೇ.10ರಷ್ಟು ಆಡಳಿತ ವೆಚ್ಚ | ರೂ. 31,055-00 |
| 2) ಶೇ.10ರಷ್ಟು ಆಡಿಟ್ ವೆಚ್ಚ | ರೂ. 3,105-00 |
| 3) ಪ್ರಕಟಣಾ ವೆಚ್ಚ | ರೂ. 2,00,000-00 |
| ಒಟ್ಟು | ರೂ. 2,34,160-00 |
| **"ಅ+ಆ" ಒಟ್ಟು ವೆಚ್ಚ** | **ರೂ. 5,44,714-00** |

(ಐದು ಲಕ್ಷದ ನಲವತ್ನಾಲ್ಕು ಸಾವಿರದ ಏಳು ನೂರ ಹದಿನಾಲ್ಕು ರೂಪಾಯಿಗಳು ಮಾತ್ರ)

ಭೂ-ಸ್ವಾಧೀನ ಕಾಯ್ದೆಯನ್ವಯ 405 ಚ.ಅ. ಜಾಗವನ್ನು ಭೂ-ಸ್ವಾಧೀನಪಡಿಸಿಕೊಂಡು, ಒಟ್ಟು ರೂ.5,44,714-00ಗಳ ಭೂಪರಿಹಾರವನ್ನು ಮಾಲೀಕರಿಗೆ ನೀಡುವಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳುವ ಬಗ್ಗೆ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:10/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:333/2008-09**

ರಂಗಶ್ರೀ ಕಲಾ ಸಂಸ್ಥೆ (ರಿ), ರವರಿಗೆ ಅನುದಾನ/ಸಹಾಯಧನ ಮಂಜೂರು ಮಾಡುವ ಬಗ್ಗೆ.

**ಪ್ರಸ್ತಾವನೆ:**

ರಂಗಶ್ರೀ ಕಲಾ ಸಂಸ್ಥೆ (ರಿ), ನಂ175, 14ನೇ ಮುಖ್ಯರಸ್ತೆ, 15ನೇ 'ಇ' ಬಸ್ ನಿಲ್ದಾಣ, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು, ಸಂಸ್ಥೆಯವರು ಅರ್ಜಿ ಮತ್ತು ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯು ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಾದ ನಾಟ್ಯ ಸ್ಪರ್ಧೆ, ನಾಟಕ ಸ್ಪರ್ಧೆ, ನಾಟಕ ನೃತ್ಯ, ಸಂಗೀತ ಹಾಗೂ ಬಡ ಕಲಾವಿದರಿಗೆ ನೆರವು ಮುಂತಾದವುಗಳ ಜೊತೆಗೆ ಬಡಕುಟುಂಬದ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಪಠ್ಯಪುಸ್ತಕಗಳು, ಸಮವಸ್ತ್ರಗಳ ವಿತರಣೆ ಹಾಗೂ ಅಂಗವಿಕಲರಿಗೆ ಹಲವಾರು ಸೌಲಭ್ಯಗಳನ್ನು ಒದಗಿಸುತ್ತಾ ಬಂದಿರುವುದಾಗಿ ತಿಳಿಸಿ, ಪಾಲಿಕೆ ವತಿಯಿಂದ 2007-08ನೇ ಸಾಲಿಗೆ ರೂ.2.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಮಾನ್ಯ ಆಡಳಿತಗಾರರವರ ಗಮನಕ್ಕೆ ತರುತ್ತಾ ಪ್ರಸ್ತಾಪಿತ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2008-09 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ:24, ಸಂಸ್ಕೃತಿ ಮತ್ತು ಕ್ರೀಡೆ, ಕೊಡುಗೆ ಮತ್ತು ಸಹಾಯಾನುದಾನದಡಿ ಮೀಸಲಿರಿಸಿರುವ ರೂ.300.00 ಲಕ್ಷಗಳ ಅನುದಾನದಲ್ಲಿ, 2006-07ನೇ ಸಾಲಿನಲ್ಲಿ ಮಂಜೂರು ಮಾಡಿದ್ದಂತೆ, ರೂ.75,000/-ಗಳ ಅನುದಾನವನ್ನು ಪ್ರಸ್ತಾಪಿತ ಸಂಸ್ಥೆಗೆ 2008-09ನೇ ಸಾಲಿಗೂ ಮಂಜೂರು ಮಾಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:15/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/07/2008 ರ ನಡವಳಿಗಳು**

**ವಿಷಯ ಸಂಖ್ಯೆ:326/2008-09**

ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ "ಸ್ವಾತಂತ್ರ್ಯ ಉದ್ಯಾನವನ" ಅಭಿವೃದ್ಧಿ ಕಾಮಗಾರಿಯ ಮೊದಲನೇ ಹಂತದ ಕೆಲಸಗಳನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ "ಸ್ವಾತಂತ್ರ್ಯ ಉದ್ಯಾನವನ" ಅಭಿವೃದ್ಧಿ ಮೂಲ ಕಾಮಗಾರಿಯ ಅಂದಾಜು ಪಟ್ಟಿಯನ್ನು 2003-04ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ರೂ.729.60 ಲಕ್ಷಗಳಿಗೆ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.874.32 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ. 2007-08ನೇ ಸಾಲಿನ ದರ ಪಟ್ಟಿಯ ಆಧಾರವನ್ನು ಅವಲೋಕಿಸಿ ಪರಿಷ್ಕೃತ ಮೊತ್ತವಾದ ರೂ.1032.00 ಲಕ್ಷದ ಟೆಂಡರ್ ಮೊತ್ತವನ್ನು ಗುತ್ತಿಗೆದಾರರು ನಮೂದಿಸಿರುವ ಮೊತ್ತಕ್ಕೆ ಹೋಲಿಸಿದಾಗ ಶೇಕಡ *17.55* ರಷ್ಟು ಹೆಚ್ಚುವರಿಯಾಗಿದ್ದು, ಗುತ್ತಿಗೆದಾರರೊಂದಿಗೆ ಮರು ಸಂಧಾನ ನಡೆಸಲಾಗಿ ಗುತ್ತಿಗೆದಾರರು 1027.00 ಲಕ್ಷಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿಕೊಂಡಿರುತ್ತಾರೆ. ಸದರಿ ಪರಿಷ್ಕೃತ ಅಂದಾಜಿಗೆ ಸರ್ಕಾರದಿಂದ ದಿನಾಂಕ:12/11/2007 ರಂದು ಅನುಮೋದನೆ ಪಡೆಯಲಾಗಿದೆ.

ಮೊದಲನೇ ಹಂತದ ಕಾಮಗಾರಿಯು ಮುಗಿಯುವ ಹಂತದಲ್ಲಿದ್ದು, ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ಪಡೆಯುವಲ್ಲಿ ಟೆಂಡರ್ ಮೊತ್ತವಾದ ರೂ.1027.00 ಲಕ್ಷಗಳಿಗೆ ಸೀಮಿತಗೊಳಿಸಿ ಹಲವಾರು ಕಾಮಗಾರಿಗಳನ್ನು ಕೈ ಬಿಡಲಾಗಿರುತ್ತದೆ. ಈ ಬಗ್ಗೆ ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಅದರಂತೆ ಸಲಹೆಗಾರರು ಅಗತ್ಯಕ್ಕೆ ಅನುಗುಣವಾಗಿ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆಗೆ ಸಲ್ಲಿಸಿದ್ದು, ಮುಖ್ಯ ಅಭಿಯಂತರರು (ಯೋಜನೆ-2) ರವರು ಈ ಕೆಳಕಂಡ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

| Sl. No. | Name of the Work | Estimated Cost in Lakhs |
|---|---|---|
| 1 | Detailed sub-estimate for Children's play area, entrance water pool, concept wrap wall to the development of freedom park old Central Jail premises, Sheshadri road, Bangalore | 74.40 |

*ಈ ಹಿನ್ನೆಲೆಯಲ್ಲಿ ಹಳೇ ಕೇಂದ್ರ ಕಾರಾಗೃಹ* ಆವರಣದಲ್ಲಿ "ಸ್ವಾತಂತ್ರ್ಯ ಉದ್ಯಾನವನ" ಅಭಿವೃದ್ಧಿ *ಕಾಮಗಾರಿಯ ಮೊದಲನೇ ಹಂತದ* ಕಾಮಗಾರಿಯನ್ನು, ಪೂರ್ಣಗೊಳಿಸಲು ಮೇಲ್ಕಾಣಿಸಿದ *ಹೆಚ್ಚುವರಿ* ಕಾಮಗಾರಿಯ ಅಂದಾಜು ಮೊತ್ತ ರೂ.74.40 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:04/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:322/2008-09**

ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ "ಸ್ವಾತಂತ್ಯ ಉದ್ಯಾನವನ" ಅಭಿವೃದ್ಧಿ ಕಾಮಗಾರಿಯ ಮೊದಲನೇ ಹಂತದ ಕೆಲಸಗಳನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ "ಸ್ವಾತಂತ್ಯ ಉದ್ಯಾನವನ" ಅಭಿವೃದ್ಧಿ ಮೂಲ ಕಾಮಗಾರಿ ಅಂದಾಜು ಪಟ್ಟಿಯನ್ನು 2003-04ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ರೂ.729.00 ಲಕ್ಷಗಳಿಗೆ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.874.32 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ. 2007-08ನೇ ಸಾಲಿನ ದರ ಪಟ್ಟಿಯ ಆಧಾರವನ್ನು ಅವಲೋಕಿಸಿ ಪರಿಷ್ಕೃತ ಮೊತ್ತವಾದ ರೂ.1032.00 ಲಕ್ಷದ ಟೆಂಡರ್ ಮೊತ್ತವನ್ನು, ಗುತ್ತಿಗೆದಾರರು ನಮೂದಿಸಿದ ಮೊತ್ತಕ್ಕೆ ಹೋಲಿಸಿದಾಗ ಶೇಕಡ 17.55 ಹೆಚ್ಚುವರಿಯಾಗಿದ್ದು, ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು 1027.00 ಲಕ್ಷಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿಕೊಂಡಿರುತ್ತಾರೆ. ಸದರಿ ಪರಿಷ್ಕೃತ ಅಂದಾಜಿಗೆ ಸರ್ಕಾರದಿಂದ ದಿನಾಂಕ:12/11/2007 ರಂದು ಅನುಮೋದನೆ ಪಡೆಯಲಾಗಿದೆ.

ಮೊದಲನೇ ಹಂತದ ಕಾಮಗಾರಿಯು ಮುಗಿಯುವ ಹಂತದಲ್ಲಿದ್ದು, ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ಪಡೆಯುವಲ್ಲಿ ಟೆಂಡರ್ ಮೊತ್ತವಾದ ರೂ.1027.00 ಲಕ್ಷಗಳಿಗೆ ಸೀಮಿತಗೊಳಿಸಿ ಹಲವಾರು ಕಾಮಗಾರಿಗಳನ್ನು ಕೈ ಬಿಡಲಾಗಿರುತ್ತದೆ. ಈ ಬಗ್ಗೆ ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗಿದ್ದು ಅದರಂತೆ ಸಲಹೆಗಾರರು ಅಗತ್ಯಕ್ಕೆ ಅನುಗುಣವಾಗಿ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆಗೆ ಸಲ್ಲಿಸಿದ್ದು, ಮುಖ್ಯ ಅಭಿಯಂತರರು (ಯೋಜನೆ-2) ರವರು ಈ ಕೆಳಕಂಡ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

| Sl.No. | Name of the Work | Estimated cost in Lakhs |
|---|---|---|
| 1 | Detailed sub-estimate Proposed peoples court flooring and tower flooring to the development of freedom park at old Central Jail premises, Sheshadri road, Bangalore. | 93.71 |

ಈ ಹಿನ್ನೆಲೆಯಲ್ಲಿ ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ ಸ್ವಾತಂತ್ರ್ಯ ಉದ್ಯಾನವನದ ಅಭಿವೃದ್ಧಿ ಕಾಮಗಾರಿಯ ಮೊದಲನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಲು ಮೇಲ್ಕಾಣಿಸಿದ ಹೆಚ್ಚುವರಿ ಕಾಮಗಾರಿಯ ಅಂದಾಜು ಮೊತ್ತ ರೂ.93.71 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:04/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:04/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:323/2008–09**

ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ "ಸ್ವಾತಂತ್ಯ ಉದ್ಯಾನವನ" ಅಭಿವೃದ್ಧಿ ಕಾಮಗಾರಿಯ ಮೊದಲನೇ ಹಂತದ ಕೆಲಸಗಳನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ "ಸ್ವಾತಂತ್ಯ ಉದ್ಯಾನವನ" ಅಭಿವೃದ್ಧಿ ಮೂಲ ಕಾಮಗಾರಿಯ ಅಂದಾಜು ಪಟ್ಟಿಯನ್ನು 2003–04ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ರೂ.729.00 ಲಕ್ಷಗಳಿಗೆ ತಯಾರಿಸಲಾಗಿದ್ದು, ರೂ.874.32 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ. 2007–08ನೇ ಸಾಲಿನ ದರ ಪಟ್ಟಿಯ ಆಧಾರವನ್ನು ಅವಲೋಕಿಸಿ ಪರಿಷ್ಕೃತ ಮೊತ್ತವಾದ ರೂ.1032.00 ಲಕ್ಷದ ಟೆಂಡರ್ ಮೊತ್ತವನ್ನು ಗುತ್ತಿಗೆದಾರರು ನಮೂದಿಸಿದ ಮೊತ್ತಕ್ಕೆ ಹೋಲಿಸಿದಾಗ ಶೇಕಡ 17.55 ಹೆಚ್ಚುವರಿಯಾಗಿದ್ದು, ಗುತ್ತಿಗೆದಾರರೊಂದಿಗೆ ಮರು ಸಂಧಾನ ನಡೆಸಲಾಗಿ ಗುತ್ತಿಗೆದಾರರು 1027.00 ಲಕ್ಷಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿಕೊಂಡಿರುತ್ತಾರೆ. ಸದರಿ ಪರಿಷ್ಕೃತ ಅಂದಾಜಿಗೆ ಸರ್ಕಾರದಿಂದ ದಿನಾಂಕ:12/11/2007 ರಂದು ಅನುಮೋದನೆ ಪಡೆಯಲಾಗಿದೆ.

ಮೊದಲನೇ ಹಂತದ ಕಾಮಗಾರಿಯು ಮುಗಿಯುವ ಹಂತದಲ್ಲಿದ್ದು, ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ಪಡೆಯುವಲ್ಲಿ ಟೆಂಡರ್ ಮೊತ್ತವಾದ ರೂ.1027.00 ಲಕ್ಷಗಳಿಗೆ ಸೀಮಿತಗೊಳಿಸಿ ಹಲವಾರು ಕಾಮಗಾರಿಗಳನ್ನು ಕೈ ಬಿಡಲಾಗಿರುತ್ತದೆ. ಈ ಬಗ್ಗೆ ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗಿದ್ದು ಅದರಂತೆ ಸಲಹೆಗಾರರು ಅಗತ್ಯಕ್ಕೆ ಅನುಗುಣವಾಗಿ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆಗೆ ಸಲ್ಲಿಸಿದ್ದು, ಮುಖ್ಯ ಅಭಿಯಂತರರು (ಯೋಜನೆ–2) ರವರು ಈ ಕೆಳಕಂಡ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

| Sl.No. | Name of the Work | Estimated cost in Lakhs |
|---|---|---|
| 1 | Detailed sub-estimate for Providing path ways to the development of freedom park at old Central Jail premises, Sheshadri road, Bangalore. | 91.04 |

ಈ ಹಿನ್ನೆಲೆಯಲ್ಲಿ ಹಳೇ ಕೇಂದ್ರ ಕಾರಾಗೃಹ ಆವರಣದಲ್ಲಿ ಸ್ವಾತಂತ್ರ್ಯ ಉದ್ಯಾನವನದ ಅಭಿವೃದ್ಧಿ ಕಾಮಗಾರಿಯ ಮೊದಲನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಲು ಮೇಲ್ಕಾಣಿಸಿದ ಹೆಚ್ಚುವರಿ ಕಾಮಗಾರಿಯ ಅಂದಾಜು ಮೊತ್ತ ರೂ.91.04 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:03/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:03/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು